# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ನಗರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-232015,
ಮೊಬೈಲ್: 9448994845
ಫ್ಯಾಕ್ಸ್: 08232-233600
ಇ-ಮೇಲ್: aee_maddur@rediffmail.com

ಕ್ರಮಾಂಕ:ಸಕಾನಿಇಂ(ವಿ)/ಸಲೆಅ/ಕಾ&ಪಾ,ನಉವಿ/ಮದ್ದೂರು-1/2018-19/ 4135-41 ದಿನಾಂಕ: 22/12/18
ಲಗತ್ತು:

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಉಪವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ:18.12.2018 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ನಗರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ / ಸಿಬ್ಬಂದಿ | ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ಶ್ರೀನಿವಾಸ ಮೂರ್ತಿ | ಅ ಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾ ನಿ ಇಂ(ವಿ) | ಮದ್ದೂರು ವಿಭಾಗ |
| 3 | ಶ್ರೀ ಸುಭಾಷ್ ಟಿ. ಗೊರವರ್ | ಸ ಕಾ ಇಂ(ವಿ) | ಮದ್ದೂರು ವಿಭಾಗ ಕಚೇರಿ |
| 4 | ಶ್ರೀ ಎಸ್.ರಾಜೇಂದ್ರ | ಸ ಕಾ ಇಂ(ವಿ) | ಮದ್ದೂರು ನಗರ ಉಪವಿಭಾಗ |
| 5 | ಶ್ರೀ ಜಿ.ಮೋಹನ್ | ಸ ಕಾ ಇಂ(ವಿ) | ಮದ್ದೂರು ಗ್ರಾಮಾಂತರ ಉಪವಿಭಾಗ |
| 6 | ಶ್ರೀ ಎನ್.ನಾಗರಾಜು | ಪ್ರಭಾರ ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 7 | ಶ್ರೀಮತಿ ಎಸ್.ಸುವರ್ಣ | ಸ ಇಂ(ವಿ) ತಾಂತ್ರಿಕ | ಮದ್ದೂರು ನಗರ ಉಪವಿಭಾಗ |
| 8 | ಶ್ರೀ ಎಂ.ಪಿ ಪ್ರಕಾಶ್ | ಸ ಇಂ(ವಿ) | ಪಟ್ಟಣ ಶಾಖೆ, ನಗರ ಉಪವಿಭಾಗ ಮದ್ದೂರು |
| 9 | ಶ್ರೀ ಮೊಹಮ್ಮದ್ ಸಲ್ಲಾವುದ್ದೀನ್ ಖಾನ್ | ಸ ಇಂ(ವಿ) | ಕಾ & ಪಾ ಘಟಕ-1, ನಗರ ಉಪವಿಭಾಗ ಮದ್ದೂರು |
| 10 | ಶ್ರೀ ಎಂ.ಗೋವಿಂದರಾಜು | ಪ್ರ ಕಿಇಂ(ವಿ) | ಸೋಮನಹಳ್ಳಿ ಶಾಖೆ, ನಗರ ಉಪವಿಭಾಗ ಮದ್ದೂರು |
| 11 | ಶ್ರೀ ಆರ್.ಪ್ರಕಾಶ್ | ಪ್ರ ಕಿಇಂ(ವಿ) | ಗೆಜ್ಜಲಗೆರೆ ಶಾಖೆ, ನಗರ ಉಪವಿಭಾಗ ಮದ್ದೂರು |
| 12 | ಶ್ರೀ ಎಸ್.ರಾಜೇಶ್ | ಕಿ ಇಂ(ವಿ) | ಘಟಕ -2 ಕೆ.ಎಂ.ದೊಡ್ಡಿ ಶಾಖೆ |
| 13 | ಶ್ರೀಮತಿ ಎಸ್.ಬಿಂದು | ಕಿ ಇಂ(ವಿ) | ಘಟಕ -1 ಕೆ.ಎಂ.ದೊಡ್ಡಿ ಶಾಖೆ |
| 14 | ಶ್ರೀ ಹೆಚ್.ಎಂ.ಮಹೇಶ್ ಕುಮಾರ್ | ಹಿರಿಯ ಸಹಾಯಕ | ಮದ್ದೂರು ಉಪವಿಭಾಗ-1 |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಯಿಸಿ ಉತ್ತರಿಸಲಾಯಿತು.

ಶ್ರೀ ಎಸ್.ರಾಜೇಂದ್ರ ಸ.ಕಾ.ನಿ.ಇಂ(ವಿ) ನಗರ ಉಪವಿಭಾಗ ರವರು ಹಿಂದಿನ ಜನಸಂಪರ್ಕ ಸಭೆಯ ನಡಾವಳಿಯನ್ನು ಓದಿ ತೆಗೆದುಕೊಂಡ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ವಿವರಣೆ ನೀಡಿದರು.

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು -ಶ್ರೀ ಶಂಕರಯ್ಯ ವಳಗೆರೆಹಳ್ಳಿ 9742171165 | |
| 1 | 1.ಸ್ವಂತ ಕಾಮಗಾರಿಯಲ್ಲಿ ರೈಸ್‌ಮಿಲ್‌ಗೆ ಪರಿವರ್ತಕ ಅಳವಡಿಸಿಕೊಂಡಿದ್ದು, ಗ್ರಾಮದ ಗೃಹಬಳಕೆಗೆ ಇದೇ ಪರಿವರ್ತಕದಿಂದ ಲೋಡ್ ಹಾಕಿದ್ದು, ಓವರ್ ಲೋಡ್ ಆಗಿರುವುದರಿಂದ ಗೃಹಬಳಕೆಗೆ ಪ್ರತ್ಯೇಕ ಪರಿವರ್ತಕವನ್ನು / ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕೋರಿದರು<br>2.ಐ.ಪಿ.ಫೀಡರ್‌ಗಳಲ್ಲಿರುವ ಪ್ರಸಕ್ತವಿರುವ ಟಿ.ಸಿ.ಗಳಿಗೆ ಮೊತ್ತ ಪಾವತಿಸಿರುವರೆಲ್ಲರಿಗೂ ಸಂಪರ್ಕ ಕಲ್ಪಿಸಿಕೊಳ್ಳುತ್ತಿರುವುದರಿಂದ ಟಿ.ಸಿ.ಗಳು ಸುಟ್ಟು ಹೋಗುವುದು ಸರ್ವೇ ಸಾಮಾನ್ಯವಾಗಿದ್ದು, ಹೆಚ್ಚುವರಿ ಟಿ.ಸಿ.ಹಾಕಿಸಿಕೊಡುವಂತೆ ಹಾಗೂ ಹೆಚ್.ಡಿ.ಯು.ಎಸ್. ಯೋಜನೆಯಡಿ ಬೆಸ್ಕಾಂ ನಲ್ಲಿ ಹಾಕುತ್ತಿರುವಂತೆ ಪ್ರತ್ಯೇಕವಾಗಿ ಟಿ.ಸಿ.ಹಾಕಿಸಿಕೊಡಲು ಕೋರಲಾಯಿತು.<br>3.ವಿದ್ಯುತ್ ತಂತಿ ಮೇಲೆ ಹಾದು ಹೋಗಿರುವ ಜಂಗಲ್ ಅಧಿಕವಾಗಿದ್ದು ಕಟಿಂಗ್ ಮಾಡಲು ಕೋರಿದರು | 1.ಇದಕ್ಕೆ ಸಂಬಂಧಪಟ್ಟ ಶಾಖಾಧಿಕಾರಿ ಉತ್ತರಿಸಿ, ಈಗಾಗಲೇ ಸ್ಥಳ ಪರಿಶೀಲಿಸಲಾಗಿದ್ದು ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಳ್ಳಲು ನಿಯಮಾನುಸಾರ ತುರ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು<br>2.ಇದಕ್ಕೆ ಪ್ರತಿಕ್ರಯಿಸಿ, ಈ ಯೋಜನೆಯಡಿ ಪ್ರತ್ಯೇಕವಾಗಿ ಟಿ.ಸಿ.ಹಾಕಿಸಿಕೊಡಲು ನಿಗಮದ ಗಮನಕ್ಕೆ ತರಲಾಗುವುದು ಎಂದು ತಿಳಿಸಲಾಯಿತು.<br>3.ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಲಹೆ ನೀಡಿ, ಪ್ರತಿ ಗುರುವಾರ ಜಂಗಲ್ ಕಟಿಂಗ್ ದಿನ ಎಂದು ನಿಗದಿ ಪಡಿಸಿ ಎಲ್ಲಾ ಸಿಬ್ಬಂದಿಗಳನ್ನು ಉಪಯೋಗಿಸಿಕೊಂಡು ನಿರ್ವಹಿಸಲು ತಿಳಿಸಲಾಯಿತು |
| | ಗ್ರಾಹಕರು- ಶಿವಣ್ಣ, ಹುಲಿಗೆರೆಪುರ | |
| 2 | 2014 ನೇ ಮಾಹೆಯಲ್ಲಿ ಐ.ಪಿ. ಸಂಪರ್ಕಕ್ಕೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ನಡೆಸಲು ಪಕ್ಕದ ಜಮೀನಿನವರು ಬಿಟ್ಟಿರುವುದಿಲ್ಲ ಆದ್ದರಿಂದ ಮತ್ತೊಮ್ಮೆ 2016 ರಲ್ಲಿ ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಸಲಾಗಿದ್ದರೂ ಈವರೆಗೂ ಕಾಮಗಾರಿ ಮಾಡಿಕೊಟ್ಟಿರುವುದಿಲ್ಲ. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಕಾ.ನಿ.ಇಂ(ವಿ) ರವರಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗು ಪ್ರತ್ಯೇಕ ಅಂದಾಜು ಪಟ್ಟಿ ತಯಾರಿಸಿ ಸದರಿಯವರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| | ಗ್ರಾಹಕರು- ಶ್ರೀ ರಮೇಶ್. ಸೋಂಪುರ 8495927780 | |
| 3 | ತೋಟದಲ್ಲಿ ನಿರ್ಮಿಸುತ್ತಿರುವ ಮನೆಗೆ ನಿರಂತರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು | ಇದಕ್ಕೆ ಪ್ರತಿಕ್ರಿಯಿಸಿ ಗ್ರಾಮ ಪಂಚಾಯಿತಿಯಿಂದ ಎನ್.ಓ.ಸಿ. ಪಡೆದು, ನಿಯಮಾನುಸಾರ ಅರ್ಜಿ ಸಲ್ಲಿಸಿ ಸಂಪರ್ಕ ಪಡಯಲು ಸೂಚಿಸಿದರು |
| | ಗ್ರಾಹಕರು- ಶ್ರೀ ಸಂತೋಷ್ ಕುಮಾರ್, ಮದ್ದೂರು 7899947678 | |
| 4 | ಮದ್ದೂರು ಟೌನ್ ಹೊಳೆ ಆಂಜನೇಯ ದೇವಸ್ಥಾನದ ಹತ್ತಿರ ಟಿ.ಸಿ.ಇದ್ದು ತುಂಬಾ ಬಾಗಿದ ರೀತಿಯಲ್ಲಿ (ಮಧು ವೈನ್ಸ್ ಹತ್ತಿರ) ಇದ್ದು, ಪಕ್ಕದಲ್ಲೇ ಶಾಲೆ ಕೂಡ ಇದ್ದೂ ಜನ ಸಂದಣಿ ಇರುವುದರಿಂದ ಅಪಘಾತವಾಗುವುದಕ್ಕಿಂತ ಮೊದಲೇ ಬದಲಿಸಲು ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿ ಬಾಗಿರುವ ಪರಿವರ್ತಕವನ್ನು ಗೈ ಹಾಕಿ ಸರಿಪಡಿಸಿ ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು. |

| ೦ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು- ಶ್ರೀ ಯೋಗೇಶ್ ತಿಪ್ಪೂರು, 9844553269 | |
| 5 | 2016 ರಲ್ಲಿ ಐ.ಪಿ. ಅಕ್ರಮ ಸಕ್ರಮದಲ್ಲಿ ಮೊತ್ತ ಪಾವತಿಸಿದ್ದು ಈವರೆಗೆ ಕಾಮಗಾರಿ ಮಾಡಿಕೊಟ್ಟಿರುವುದಿಲ್ಲ ಎಂದು ದೂರಿದರು. | ಇದಕ್ಕೆ ಪ್ರತಿಕ್ರಿಯಿಸಿ ತಮ್ಮ ಜೇಷ್ಠತೆ ಪಟ್ಟಿಯನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಿದ್ದು, ಜೇಷ್ಠತೆಯನ್ನು ಪರಿಶೀಲಿಸಿ ಕಾಮಗಾರಿ ಮಾಡಿಕೊಡಲಾಗುವುದು ಎಂದು ತಿಳಿಸಲಾಯಿತು |
| | ಗ್ರಾಹಕರು – ಶ್ರೀ ಪ್ರಕಾಶ್, ಸಾದೊಳಲು 9886956550 | |
| 6 | 100 ಕೆ.ವಿ.ಎ. ಟಿ.ಸಿ. ಇದ್ದು ಇದರಲ್ಲಿ 19 ಜನ ಐ.ಪಿ.ಹಾಕಿದ್ದು ಪದೇ ಪದೇ ಸುಟ್ಟು ಹೋಗುತ್ತಿದ್ದು, ಪ್ರತ್ಯೇಕ 4 ಜನಕ್ಕೆ ಸೇರಿ ಟಿ.ಸಿ. ಮಾಡಿಕೊಡಲು ಕೋರಿರುತ್ತಾರೆ. | ಈ ಬಗ್ಗೆ ಪ್ರತಿಕ್ರಿಯಿಸಿ, ಹೊಸ ಯೋಜನೆಯೊಂದು ಜಾರಿಯಾಗಲಿದ್ದು, ಸದರಿ ಯೋಜನೆಯಲ್ಲಿ 3 ಐ.ಪಿ.ಸೆಟ್ ಗಳಿಗೆ ಒಂದರಂತೆ ಟಿ.ಸಿ.ಹಾಕಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು |
| | ಗ್ರಾಹಕರು – ಶ್ರೀ ಕೃಷ್ಣಮೂರ್ತಿ, ಉಪ್ಪಿನಕೆರೆ 9886753690 | |
| 7 | RUIP ಯೋಜನೆಯಲ್ಲಿ 2017 ರಲ್ಲಿ ಮೊತ್ತ ಪಾವತಿಸಿದ್ದು, ಕಾಮಗಾರಿ ಮಾಡಿಕೊಡಲು ಕೋರಲಾಯಿತು ಹಾಗು ಹತ್ತಿರಕ್ಕೆ ಬೇರೆ ಕಡೆಯಿಂದ ವೈರ್ ಹಾಕಿದ್ದು ಹತ್ತಿರವಿರುವುದರಿಂದ ಅಲ್ಲಿಂದ ಸಂಪರ್ಕ ಕಲ್ಪಿಸಿಕೊಡಲು ಕೋರಲಾಯಿತು. | ಇದಕ್ಕೆ ಪ್ರತಿಕ್ರಿಯಿಸಿ ತಮ್ಮ ಜೇಷ್ಠತೆ ಪಟ್ಟಿಯನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಿದ್ದು, ಜೇಷ್ಠತೆಯನ್ನು ಪರಿಶೀಲಿಸಿ ಕಾಮಗಾರಿ ಮಾಡಿಕೊಡಲಾಗುವುದು ಎಂದು ತಿಳಿಸಲಾಯಿತು |
| | ಗ್ರಾಹಕರು – ಶ್ರೀ ಚನ್ನ ಬಸವರಾಜು, ಸಾದೊಳಲು 8296649392 | |
| 8 | 100 ಕೆ.ವಿ.ಎ. ಟಿ.ಸಿ. ಇದ್ದು, ಹೆಚ್ಚುವರಿ ಸಂಪರ್ಕ ಕಲ್ಪಿಸಿಕೊಂಡಿದ್ದು ಮೊತ್ತ ಪಾವತಿಸದಿದ್ದರೂ ಸಂಪರ್ಕ ಕಲ್ಪಿಸಿದ್ದು ಪದೇ ಪದೇ ಸುಟ್ಟು ಹೋಗುತ್ತಿರುತ್ತದೆ ಎಂದು ತಿಳಿಸಲಾಯಿತು | ಇದಕ್ಕೆ ಪ್ರತಿಕ್ರಿಯಿಸಿ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಸೂಚಿಸಲಾಯಿತು, ಹೊಸದಾಗಿ ಬಾವಿ ಕೊರೆಸಿರುವವರನ್ನು ಹಣ ಪಾವತಿಸುವಂತೆ ಮನವೊಲಿಸಲು ಸೂಚಿಸಲಾಯಿತು |
| | ಗ್ರಾಹಕರು –ನ.ಲಿ.ಕೃಷ್ಣ, ನಗರಕೆರೆ | |
| 9 | 1.24 X 7 ಸರ್ವಿಸ್ ಸ್ಟೇಷನ್ ವಾಹನವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು, ವಾಹನ ದಲ್ಲಿ ಸಂಚರಿಸುವ ನಿಗಮದ ಸಿಬ್ಬಂದಿಗಳು ಸಮವಸ್ತ್ರ ಧರಿಸುತ್ತಿರುವುದಿಲ್ಲ.<br>2.ಸರ್ಕಾರಿ ಶಾಲೆಗಳ ಮೇಲೆ ಲೈನ್‌ಗಳು ಹಾದು ಹೋಗಿದ್ದು ಸ್ಥಳಾಂತರಿಸಲು ತಿಳಿಸಲಾಯಿತು.<br>3.ಹೊಸದಾಗಿ ಮಾಪಕಗಳನ್ನು ಅಳವಡಿಸುತ್ತಿರುವ ಬಗ್ಗೆ ಮಾಹಿತಿ ಕೇಳಿದರು | 1.ಸರ್ವಿಸ್ ಸ್ಟೇಷನ್ ವಾಹನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಹೊಸದಾಗಿ ನೇಮಕಗೊಂಡಿರುವ ಸಿಬ್ಬಂದಿಗಳಾಗಿದ್ದು ಸಮವಸ್ತ್ರ ಲಭ್ಯವಿರುವುದಿಲ್ಲ. ಬಂದ ನಂತರ ವಿತರಿಸಲಾಗುವುದು.<br>2.ಇದಕ್ಕೆ ಪ್ರತಿಕ್ರಿಯಿಸಿ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು<br>3.ಡಿ.ಡಿ.ಯು.ಜಿ.ಜೆ.ವೈ. ಯೋಜನೆಯಡಿ, ವಿದ್ಯುತ್ ನಷ್ಟ / ಸೋರಿಕೆ ತಡೆಗಟ್ಟುವ ನಿಟ್ಟಿನಲ್ಲಿ ಹಳೆಯ ಮೆಕ್ಯಾನಿಕ್ ಮಾಪಕ ಬದಲಿಸಿ, ಎಲೆಕ್ಟ್ರೋ ಸ್ಟ್ಯಾಟಿಕ್ ಮಾಪಕ ಅಳವಡಿಸಲಾಗುತ್ತಿದೆ ಎಂದು ತಿಳಿಸಲಾಯಿತು |
| | ಗ್ರಾಹಕರು – ಶ್ರೀ ಬಸವರಾಜು, ಅಜ್ಜಹಳ್ಳಿ 9663970680 | |
| 10 | ಕೆಲವು ಕುಡಿಯುವ ನೀರು ಕೊಳವೆ ಬಾವಿಗಳು ಬತ್ತಿ ಹೋಗಿದ್ದು, ಮಾಪಕ ಮತ್ತು ಪರಿವರ್ತಕವನ್ನು ಹೊಸದಾಗಿ ಕೊರೆದಿರುವ ಕೊಳವೆ ಬಾವಿಗಳಿಗೆ ಸ್ಥಳಾಂತರಿಸಿಕೊಡಲು ಕೋರಿದರು | ಈ ಸಂಬಂಧ ಕುಡಿಯುವ ನೀರು ಬತ್ತಿ ಹೋಗಿರುವ ಕೊಳವೆ ಬಾವಿಗಳನ್ನು ಸ್ಥಳಾಂತರಿಸಲು ಸಂಬಂಧಪಟ್ಟ ಪಿ.ಡಿ.ಓ. ರವರಿಂದ ಅರ್ಜಿ ಪಡೆದು ಟಿ.ಸಿ. ಸಮೇತ ಸ್ಥಳಾಂತರಿಸಲು ಸೂಚಿಸಲಾಯಿತು |

| | | |
|---|---|---|
| ಗ್ರಾಹಕರು- ಶ್ರೀ ಮುಹಿಬ್ ಪಾಷ ವಿದ್ಯುತ್ ಗುತ್ತಿಗೆ ದಾರರು, ಮದ್ದೂರು 9986553884 | | |
| 11 | ಮಧ್ಯಂತರ ಕಂಬಗಳನ್ನು ಬದಲಾಯಿಸಲು ಕಾರ್ಯ ಗುತ್ತಿಗೆಯನ್ನು ಪ್ರತ್ಯೇಕ ತುರ್ತು ಸಂದರ್ಭಗಳಲ್ಲಿ ಸ್ಥಳೀಯ ಗುತ್ತಿಗೆದಾರರಿಂದ ಏಕೆ ಮಾಡಿಸುತ್ತಿಲ್ಲ ಎಂದು ಕೇಳಿದರು | ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಸಲಹೆ ನೀಡಿ, ಸ.ಕಾ.ನಿ.ಇಂ(ವಿ) ರವರಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ತಿಳಿಸಲಾಯಿತು. |
| ಗ್ರಾಹಕರು – ಶ್ರೀ ವರದರಾಜು, ಮದ್ದೂರು 8050601167 | | |
| 12 | ಶ್ರೀ ರಾಜೇಂದ್ರ ಚಾರಿ ಕಿರಿಯ ಸಹಾಯಕ ರವರು ಬೇರೆ ಬ್ಯಾಂಕಿನಲ್ಲಿ ಎನ್.ಓ.ಸಿ. ಪಡೆದು ಎರಡೆರಡು ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆ ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು | ಈ ಬಗ್ಗೆ ಲೆಕ್ಕಾಧಿಕಾರಿಗಳಿಗೆ ಸಲಹೆ ನೀಡಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| ಗ್ರಾಹಕರು – ಶ್ರೀ ಬೋರೇಗೌಡ, ಗುರುದೇವಹಳ್ಳಿ 8970917361 | | |
| 13 | ಶ್ರೀ ಗೋವಿಂದರಾಜು ಮೇಲ್ವಿಚಾರಕ ರವರ ಮೇಲೆ ಲೋಕಾಯುಕ್ತ ರವರಿಂದ ದಾಳಿ ನಡೆದು ಪ್ರಕರಣ ನ್ಯಾಯಾಲಯದಲ್ಲಿದ್ದರೂ ಸಹ ಮತ್ತೊಮ್ಮೆ ಈ ನಗರ ಉಪವಿಭಾಗಕ್ಕೆ ನಿಯೋಜಿಸಿರುವ ಬಗ್ಗೆ ಪ್ರಶ್ನಿಸಿದರು ಹಾಗೂ ಸದರಿಯವರು ಸಾಕ್ಷಿ ಹೇಳದಂತೆ ಬೆದರಿಕೆ ಹಾಕುತ್ತಿರುವ ಬಗ್ಗೆ ತಿಳಿಸಿದರು | ಇದಕ್ಕೆ ಪ್ರತಿಕ್ರಿಯಿಸಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು |

| ಕ್ರ.ಸಂಖ್ಯೆ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಸಲಹೆಗಳು |
|---|---|
| 1 | ದೂರುದಾರರು ಕೋರಿದ್ದಲ್ಲಿ ಸಭಾ ನಡಾವಳಿಯ ಪ್ರತಿಯನ್ನು ನೀಡಲು ಸೂಚಿಸಲಾಯಿತು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ನಗರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಮು.ಕ